# ಆಹಾ ಸುದ್ದಿ!

★ ಸಸಿತೋಟ




5 ಅಡಿ X 7 ಅಡಿ ಅಳತೆಯ ಕೊಠಡಿಗೆ ಒಂದು ರಾತ್ರಿ ಬಾಡಿಗೆ ಎಷ್ಟಿರಬಹುದು, ಅದೂ ಅಲ್ಯೂಮಿನಿಯಂ ಮತ್ತು ವಿನೈಲ್ ತಗಡಿನಿಂದ ಮಾಡಿದ ಕೊಠಡಿಗೆ! ಅಮೆರಿಕಾದ ಡೆನ್ವರ್‌ನಲ್ಲಿರುವ ಇಂತಹ ಕೊಠಡಿಗೆ ಒಂದು ರಾತ್ರಿಯ ಬಾಡಿಗೆ 50 ಸಾವಿರ ಡಾಲರ್. ಇದನ್ನು ವ್ಯಾನ್‌ನ ಸಿಸರ್ ಲಿಫ್ಟ್ ಮೇಲೆ ನಿಲ್ಲಿಸಲಾಗಿದ್ದು, ಗಾಳಿಯ ಮೇಲೆ ತಗಡಿನ ಶೆಡ್ ಎಂದು ಖುಷಿಪಡಬಹುದು.

ಥಾಯ್ಲಂಡ್ ಶಿಕ್ಷಕ ವೀರಾಚತ್ ಪ್ರೇಮಾನಂದ್‌ಗೆ ಡ್ರಮ್ ಮೇಲೆ ಭಾರಿ ಪ್ರೇಮ. ಕಲಿಯಲು ಪುರುಸೊತ್ತಿಲ್ಲವೋ ಅಥವಾ ಈತನಿಗೆ ಕಲಿಸುವಷ್ಟು ಗುರುಗಳಿಗೇ ಸಂಗೀತ ಜ್ಞಾನ ಸಾಲದೋ, ಗೋಡೆ ಮೇಲೆ ಡ್ರಮ್ ಚಿತ್ರ ಬರೆದು ಬಾರಿಸುತ್ತಾನೆ. ಹಿನ್ನೆಲೆಯಲ್ಲಿ ಡ್ರಮ್‌ನ ಬೀಟ್ಸ್ ಜೋರಾಗಿ ಸಿಡಿಯಲ್ಲಿ ಅಬ್ಬರಿಸುತ್ತದೆ. ಈಗ ಈ ಚಿತ್ರ ಆನ್‌ಲೈನ್‌ನಲ್ಲಿ ಹರಿದಾಡುತ್ತಿದ್ದು, 2 ಲಕ್ಷ ಮಂದಿ ನೋಡಿದ್ದಾರಂತೆ. ಅಸಾಮಾನ್ಯವಾಗಿದ್ದನ್ನು ಮಾಡುವುದೆಂದರೆ ಇದೇ ಇರಬಹುದು.



ಮಾಲೀಕ ಕೆಲಸದ ಮೇಲೆ ಇಡೀ ದಿನ ಹೊರಗಿದ್ದರೆ ಪ್ರೀತಿಯ ನಾಯಿಮರಿಗೆ ಬೋರಾಗುವುದಿಲ್ಲವೇ? ಈ ನಾಯಿಗಳ ಬೇಸರದ ಆಕಳಿಕೆ ಕಡಿಮೆ ಮಾಡಲೆಂದೇ ಅಮೆರಿಕದಲ್ಲಿ ಸದ್ಯದಲ್ಲೇ ನಾಯಿಗಳಿಗೆಂದೇ ವಿಶೇಷ ಟೀವಿ ಚಾನೆಲ್ ಶುರುವಾಗಲಿದೆಯಂತೆ. ಇದು ಸಂಗೀತ- ಅದು ಬೌಬೌ ಸಂಗೀತವೇನಲ್ಲ, ಮನರಂಜನೆ, ಅನಿಮೇಶನ್ ಚಿತ್ರಗಳನ್ನು ಒಳಗೊಂಡಿರುತ್ತದೆ. ಅಪರೂಪಕ್ಕೆ ಮಾನವ ಪ್ರಾಣಿ ಕಾಣಿಸಿಕೊಳ್ಳುತ್ತಾನಂತೆ. ಅಂತೂ ನಾಯಿಗಳನ್ನೂ ಕೂಡಾ ಸೋಮಾರಿಗಳನ್ನಾಗಿ ಮಾಡಲು ಹೊರಟಂತಿದೆ.


ಭಾಗ್ಯದ ಲಕ್ಷ್ಮಿ ಬಾರಮ್ಮ

ವರಮಹಾಲಕ್ಷ್ಮಿಯನ್ನು ಆಹ್ವಾನಿಸಿ,
ಆದರಿಸಿ, ಆರಾಧಿಸಿ ಪ್ರಸಿದ್ಧಿರವರ ಉತ್ಕೃಷ್ಟ
ರೇಷ್ಮೆ ಸೀರೆಗಳೊಂದಿಗೆ ಆಚರಿಸಿ.

ಈಗ ನಮ್ಮ ಹೊಸ ಷೋರೂಂ ದೊಮ್ಮಲೂರು,
ಇಂದಿರಾನಗರ್–ಕೋರಮಂಗಲ
ಇಂಟರ್‌ಮೀಡಿಯಟ್ ರಸ್ತೆಯಲ್ಲಿ ಸಹ ತೆರೆದಿದೆ.
ಫೋನ್: 4151 1156



K.H.Road
Ph: 22236613
M.G.Road
Ph: 25580433
Bannerghatta Road
Ph: 26689345
Commercial Street
Ph: 25321545

Silks, Cottons & Salwars
Prasiddhi SILKS
A renowned name for well known saris